<u>ದಿನಾಂಕ ಃ**12.08.2024.**ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು</u>**.**

<u>ಪಾಟಿ ಸವಾಲು **: 2** ನೇ ಪ್ರತಿ ವಾದಿ ಪರ ಶ್ರೀ ಎಸ್**.**ವಿ**.**ಎಮ್ ವಕೀಲರಿಂದ ಃ</u>

1. ನಾನು ಎಂ.ಕಾಮ್. ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನಾನು ಎಲೆಕ್ಟ್ರಿಕಲ್ ಕಾಂಟ್ರ್ಯಾಕ್ಟರವರ ಕೆಳಗಡೆ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ತಂದೆಯ ತಂದೆಯವರ ಹೆಸರು ಅಬ್ಬಯ್ಯ.

2. ಅಬ್ಬಯ್ಯನವರಿಗೆ ಒಟ್ಟು 5 ಮಂದಿ ಮಕ್ಕಳು. ನನ್ನ ತಾತ ಅಬ್ಬಯ್ಯನವರು ಮೂಲತಃ ಹುಲಿಮಂಗಲ ಆನೆಕಲ್ ತಾಲ್ಲೂಕಿನವರು. ಅವರಿಗೆ ಪಿತ್ರಾರ್ಜಿತವಾದ ಆಸ್ತಿಯೂ ಹುಲಿಮಂಗಲದಲ್ಲಿತ್ತು ಎಂದರೆ ಸರಿ. ನನ್ನ ತಾತ, ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದರೂ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಅಪ್ಪ ಮತ್ತು ದೊಡ್ಡಪ್ಪರವರು ಸಣ್ಣವರಾಗಿದ್ದಗಲೇ ಅವರ ತಂದೆ ಅಬ್ಬಯ್ಯರವರು ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಅಜ್ಜಿ, ನನ್ನ ಅಪ್ಪ ಮತ್ತು ದೊಡ್ಡಪ್ಪನವರು ಒಟ್ಟಾಗಿ ವಾಸಿಸುತ್ತಿದ್ದರು.

3. ನನ್ನ ತಾತ ಅಬ್ಬಯ್ಯನವರ ಆಸ್ತಿ ಹುಲಿಮಂಗಲದಲ್ಲಿದ್ದು ಅದು ನಮ್ಮ ತಂದೆ ಮತ್ತು ದೊಡ್ಡಪ್ಪನವರ ನಡುವೆ 1/2 ರಂತೆ ಭಾಗವಾಗಿತ್ತು ಎಂದರೆ ಸರಿ. ನನ್ನ ತಂದೆಗೆ ಬಂದ ಸ್ವತ್ತುಗಳ ಸರ್ವೇ ನಂಬರ್‌ಗಳ ಪೈಕಿ ನನಗೆ ಗೊತ್ತಿರುತ್ತದೆ ಕೆಲವೊಂದು ನನಗೆ ಗೊತ್ತಿಲ್ಲ.

4. ಹುಲಿಮಂಗಲದಲ್ಲಿ ನನ್ನ ತಂದೆಗೆ ಸರ್ವೇ ನಂ. 45 ರಲ್ಲಿ 9 ಗುಂಟೆ ಗದ್ದೆ ಬಂದಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ಕೋರ್ಟ್‌ನಲ್ಲಿ ಇದ್ದು ನಮ್ಮ ತಂದೆಗೆ ಇನ್ನೂ ಜಾಸ್ತಿ ಬರಬೇಕಾಗಿರುತ್ತದೆ. ಈ 9 ಗುಂಟೆ ಆಸ್ತಿಯೂ ನನ್ನ ತಂದೆಯ ಸ್ವಾ ಧೀನದಲ್ಲಿತ್ತು ಎಂದರೆ ಸರಿ. ನನ್ನ ತಂದೆಯವರು ಚೆನ್ನಾಗಿದ್ದ ಕಾಲದಲ್ಲಿ ಹಿಂದೆ ಈ 9 ಗುಂಟೆ ಜಮೀನನಲ್ಲಿ ಭತ್ತ ಬೆಳೆಯುತ್ತಿದ್ದರು ಎಂದರೆ ಸರಿ.

5. ಸರ್ವೇ ನಂ.135 ರಲ್ಲಿ ನನ್ನ ತಂದಗೆ 20 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಈ ಬಗ್ಗೆ ಕೋರ್ಟ್‌ನಲ್ಲಿ ದಾವೆಗಳೂ ನಡೆಯುತ್ತಿದ್ದು ಈ ಆಸ್ತಿಯೂ ಹೆಚ್ಚು ಕಡಿಮೆಯಾಗಬಹುದು ಎಂದು ನುಡಿಯುತ್ತಾರೆ. ಸರ್ವೇ ನಂ. 135 ರಲ್ಲಿ 20 ಗುಂಟೆ ಹೊಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದರಲ್ಲಿ ಬೆಳೆ ಬೆಳೆಯುತ್ತಿದ್ದರೂ ಎಂದರೆ ಸರಿ. ಈ ಆಸ್ತಿಯೂ ನನ್ನ ತಂದೆಯ ಸ್ವಾಧೀನದಲ್ಲಿತ್ತು ಎಂದರೆ ಸರಿ.

6. ಸರ್ವೇ ನಂ. 156/59 ರಲ್ಲಿ 1 ಎಕರೆ ಆಸ್ತಿಯೂ ನನ್ನ ತಂದೆಗೆ ಬಂದಿತ್ತು ಎಂದರೆ ಸರಿ. ಈ ಜಮೀನಿನ ಸ್ವಾಧೀನವೂ ನನ್ನ ತಂದೆಯ ಬಳಿ ಇತ್ತು ಎಂದರೆ ಸರಿ. ಈ ಜಮೀನಿನಲ್ಲಿ ನೀಲಗಿರಿ ತೋಪನ್ನು ಮಾಡಿದ್ದರು ಎಂದರೆ ಸರಿ ಸಾಕ್ಷಿ ಮುಂದುವರಿದು ಆ ಬಗ್ಗೆ ನನಗೆ ಗೊತ್ತಿಲ್ಲ.

7. ಸರ್ವೇ ನಂ. 125/01 ರ 18 ಗುಂಟೆಯಲ್ಲಿ ನನ್ನ ತಂದಗೆ 9 ಗುಂಟೆ ಬಂದಿದೆ ಎಂದರೆ ಆ ಬಗ್ಗೆ ನನಗೆ ಎಷ್ಟು ಎಂದರೆ ಗೊತ್ತಿಲ್ಲ ದಾವೆ ನಡೆಯುತ್ತಿದೆ. ಸರ್ವೇ ನಂ. 125/01 ರ 18 ಗುಂಟೆ ಇದೆ ಎಂದರೆ ಸರಿ. ಇದರಲ್ಲಿಯೂ ಸಹ ನೀಲಗಿರಿಯ ತೋಪನ್ನು ಹಾಕಿದ್ದರು ಎಂದರೆ ಸರಿ.

ಪೂರ್ವಾಹ್ನದ ಕಲಾಪ ಮುಗಿದುದ್ದರಿಂದ ಅಪರಾಹ್ನದ ಕಲಾಪಕ್ಕೆ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,**

(ಮಮ್ತಾಜ್)
9 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು,
ಬೆಂಗಳೂರು.

<u>ದಿನಾಂಕ **12.08.2024.**ರಂದು ಅಪರಾಹ್ನ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು</u>**.**

<u>ಪಾಟಿ ಸವಾಲು **: 2** ನೇ ಪ್ರತಿ ವಾದಿ ಪರ ಶ್ರೀ ಎಸ್**.**ವಿ**.**ಎಮ್ ವಕೀಲರಿಂದ ಃ</u>

8. ಹುಲಿಮಂಗಲ ಗ್ರಾಮದಲ್ಲಿ ನಮಗೆ ಸಂಬಂಧಿಸಿದ ಒಂದು ಸಣ್ಣ ಮನೆ ಇದೆ ಎಂದರೆ ಸರಿ. ಅದಕ್ಕೆ ಒಂದು ಗುಂಟೆ ಹಿತ್ತಲು ಇದೆ ಎಂದರೆ ಸಾಕ್ಷಿಯೂ ಇದೆ, ಅದೂ ಎಷ್ಟಿದೆ ಎಂದು ಗೊತ್ತಿಲ್ಲ.

9. ನನ್ನ ತಂದೆ ಜೀವಂತವಿರುವವರೆಗೂ ಸರ್ವೆ ನಂ. 135 ರಲ್ಲಿ 20 ಗುಂಟೆಯಲ್ಲಿ ಬೆಳೆ ಬೆಳೆಯುತ್ತಿದ್ದರೂ ಎಂದರೆ ಸರಿ. ನನ್ನ ತಂದೆ ಅದರಲ್ಲಿ ಬೆಳೆಯುತ್ತಿದ್ದ ಬೆಳೆಯನ್ನು ನಮ್ಮ ಕುಟುಂಬ ಉಪಯೋಗಿಸುತ್ತಿತ್ತು ಎಂದರೆ ಸರಿ. ನಾನು ಪ್ರಸ್ತುತ ಆರ್.ಟಿ. ನಗರದಲ್ಲಿರುವ ಮನೆಗೆ ವಿಭಾಗವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ದಾವೆಗಳೊಂದಿಗೆ ಇದ್ದುದರಿಂದ ಇದಕ್ಕೆ ಮಾತ್ರ ಹಾಕಿದ್ದೇನೆ ಎಂದು ನುಡಿಯುತ್ತಾರೆ.

10. ನಾನು ಈ ದಾವೆಯಲ್ಲಿ ಗಜೇಂದ್ರರವರು ಹಾಕಿದ ಪ್ರತಿವಾದ ಪತ್ರವನ್ನು ನೋಡಿರುತ್ತೇನೆ. ನನ್ನ ಅಣ್ಣ ಹೆಚ್.ಆರ್ ವೆಂಕಟೇಶಮೂರ್ತಿ ರವರು ದಿಃ 09.07.2018 ರಂದು ವಿಭಾಗ ಬೇಕೆಂದು ಕೋರಿ ನೋಟಿಸನ್ನು ಕಳುಹಿಸಿದ್ದರು ಎಂದರೆ ಸರಿ. ಅದೇ ರೀತಿ ಅವರು ನನ್ನ ಅಕ್ಕಂದಿರಿಗೂ ಸಹ ನೋಟಿಸನ್ನು ನೀಡಿದ್ದರು ಎಂದರೆ ಸರಿ. ಆ ನೋಟಿಸ್ ನನ್ನ ಬಳಿ ಇದ್ದು ಅದನ್ನು ವಕೀಲರ ಬಳಿ ನೀಡಿರುತ್ತೇನೆ. ಆ ನೋಟೀಸ್‌ಗೆ ನಾನು ವಕೀಲರ ಮುಖಾಂತರ ಉತ್ತರವನ್ನು ನೀಡಿರುತ್ತೇನೆ. ಅದಕ್ಕೆ ಉತ್ತರವನ್ನು ಯಾವಾಗ ಕೊಟ್ಟಿದೇನೆ ಎಂದು ಗೊತ್ತಿಲ್ಲ ಆದರೆ, ಬಂದ ತಕ್ಷಣ ಕೊಟ್ಟಿದ್ದೇನೆ. ನಾನು ಕೊಟ್ಟ ಉತ್ತರದ ನೋಟೀಸ್ ನನ್ನ ಬಳಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ವಕೀಲರ ಬಳಿ ಇದೆ ಎಂದು ನುಡಿಯುತ್ತಾರೆ.

11. ನನ್ನ ಅಣ್ಣ ಕೊಟ್ಟ ನೋಟೀಸ್‌ನಲ್ಲಿ ನನ್ನ ತಂದೆ ಬಳಿ ಇದ್ದ ಹಣದ ಬಗ್ಗೆ ನಮೂದು ಇದೆ ಎಂದರೆ ಸರಿ. ಅದೇ ರೀತಿ ಅದರಲ್ಲಿ ನನ್ನ ತಂದೆ ಹೆಸರಿನಲ್ಲಿರುವ ಸೆವಿಂಗ್ಸ್ ಖಾತೆ, ರಿಕರಿಂಗ್ ಡೆಪೊಸಿಟ್ ಖಾತೆ ಮತ್ತು ಫಿಕ್ಸ್ಡ್ ಡೆಪೋಸಿಟ್ ಬಗ್ಗೆ ನಮೂದು ಇದೆ ಎಂದರೆ ಸರಿ. ಇವುಗಳ ಎಲ್ಲಾ ಮೂಲ ದಾಖಲೆಗಳು ನನ್ನ ಬಳಿ ಇದೆ ಎಂದರೆ ಸರಿ.

ಮುಂದುವರಿದ ಪಾಟೀಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,**

(ಮಮ್ತಾಜ್)
9 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು,
ಬೆಂಗಳೂರು.